# ದಿನಾಂಕ:16-03-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

(104)

## ವಿಷಯದ ಸಂಖ್ಯೆ : 31 (410)/2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕ ವಿಷಯದ ಸಂಖ್ಯೆ:195/2010-11 ರಲ್ಲಿ ಓ.ಎಫ್.ಸಿ. ಕೇಬಲ್ ಅಳವಡಿಕೆಗೆ ಪ್ರತಿ ಮೀಟರ್‌ಗೆ ಕೇಬಲ್ ಅಳವಡಿಸಲು ಆರಂಭಿಕ ವೆಚ್ಚ ರೂ.135/- ರಿಂದ ಪ್ರತಿ ಮೀಟರ್‌ಗೆ ರೂ.300/- ಗೆ ಹೆಚ್ಚಿಸಿ ದರವನ್ನು ನಿಗಧಿಪಡಿಸಲಾಗಿರುತ್ತದೆ.

ದಿನಾಂಕ:11-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:152/2012-13 ರಲ್ಲಿ ಕೆಳಕಂಡಂತೆ ನಿರ್ಣಯ ಮಾಡಲಾಗಿರುತ್ತದೆ.

> ***"ಓ.ಎಫ್.ಸಿ. ಕೇಬಲ್‌ಗೆ ಸಂಬಂಧಿಸಿದಂತೆ, ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಈಗಿನ ಪ್ರತಿ ಮೀಟರ್‌ಗೆ ರೂ.300.00 ರಿಂದ ರೂ.600.00 ಕ್ಕೆ ಹೆಚ್ಚಿಸಲಾಗುವುದು".***

ಹಾಲಿ ರಸ್ತೆ ದುರಸ್ಥಿ ಕೆಲಸವನ್ನು ಸಂಬಂಧಪಟ್ಟ ಏಜೆನ್ಸಿಗಳು ಅವರದೇ ವೆಚ್ಚದಲ್ಲಿ ನಿರ್ವಹಿಸುತ್ತಿದ್ದು, ಪ್ರತಿ ಮೀಟರ್‌ಗೆ ವಿಧಿಸುತ್ತಿರುವ ದರವು ಶುಲ್ಕದ ಭಾಗವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:11-07-2012 ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯದ ಸಂಖ್ಯೆ:152/2012-13 ರಲ್ಲಿ ಓ.ಎಫ್.ಸಿ.ಗೆ ಸಂಬಂಧಿಸಿದಂತೆ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಬಲ್ ಅಳವಡಿಕೆಗೆ ಅಗೆದ ರಸ್ತೆಯನ್ನು ದುರಸ್ಥಿ ಪಡಿಸಲು ಪ್ರತಿ ಮೀಟರ್‌ಗೆ ರೂ.300/- ರಿಂದ ರೂ.600/- ಗೆ ಹೆಚ್ಚಿಸಲಾಗಿರುತ್ತದೆ. ಇದನ್ನು ತಿದ್ದುಪಡಿ ಮಾಡಿ "ಅಗೆದ ರಸ್ತೆ ದುರಸ್ಥಿ ಪಡಿಸಲು" ಎಂಬುದರ ಬದಲಾಗಿ "ಕೇಬಲ್ ಅಳವಡಿಸಲು ಆರಂಭಿಕ ಶುಲ್ಕ" ಎಂದು ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-02-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:22-02-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:22-02-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ : 11-07-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 152/2012-13

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಅಂದಾಜುಗಳನ್ನು ತಯಾರಿಸಿ ಸ್ಥಾಯಿ ಸಮಿತಿ ಮುಂದೆ ಮಂಡಿಸಬೇಕಿರುತ್ತದೆ. ಈ ಪ್ರಕಾರ ನಗರ ಪಾಲಿಕೆಯ ಎಲ್ಲಾ ಇಲಾಖೆಗಳ ಆದಾಯ ಮತ್ತು ವೆಚ್ಚಗಳ ವಿವರಗಳನ್ನು ಕ್ರೋಢೀಕರಿಸಿ, 2011-12 ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2012-13 ನೇ ಸಾಲಿನ ಆಯವ್ಯಯ ಅಂದಾಜುಗಳ ವಿವರವುಳ್ಳ ತ:ಖ್ತೆಯನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-05-2012 ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರವರು ದಿನಾಂಕ:11-05-2012ರ ಟಿಪ್ಪಣಿಯೊಂದಿಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ, 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2010 - 2011ನೇ ಸಾಲಿನ ಲೆಕ್ಕಗಳು, 2011 - 12 ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಹಾಗೂ 2012-13ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚಗಳ ಆಯವ್ಯಯ ಅಂದಾಜುಗಳ ಕರಡು ಪ್ರತಿಯನ್ನು ನಿಯಮಾವಳಿಗಳ ಅನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿದ್ದು, ಸದರಿ ಕರಡು ಆಯವ್ಯಯದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳೊಂದಿಗೆ ಸಮಿತಿಯು ಪ್ರತ್ಯೇಕ ಸಭೆಗಳನ್ನು ವಿವಿಧ ದಿನಾಂಕಗಳಂದು ನಡೆಸಿ, ಕೂಲಂಕುಷವಾಗಿ ಚರ್ಚಿಸಲಾಯಿತು. ಅಲ್ಲದೇ ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಎಲ್ಲಾ ಪಕ್ಷಗಳ ನಾಯಕರುಗಳು, ಮಾನ್ಯ ಆಯುಕ್ತರು ಹಾಗೂ ಸರ್ಕಾರೇತರ ಸಂಸ್ಥೆ (NGO's) ಗಳೊಂದಿಗೆ ಸಹ ಸಭೆಗಳನ್ನು ನಡೆಸಿ ವಿವರವಾಗಿ ಚರ್ಚಿಸಿದ ತರುವಾಯ, ಸಮಿತಿಯು ಕರಡು ಪ್ರತಿಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಅನುಮೋದಿಸಿದೆ. ಅದರಂತೆ ಮಹಾನಗರ ಪಾಲಿಕೆಯ ಸಭೆಯ ಮುಂದೆ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012 ರ ನಿರ್ಣಯ.

ಶ್ರೀ ಎನ್.ನಾಗರಾಜ್, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:20-06-2012 ರ ನಿರ್ಣಯವನ್ನು, ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಒಪ್ಪುವುದು"

## ನಿರ್ಣಯ – 'ಎ'

ದಿನಾಂಕ 28-06-2012 ರಂದು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ 2012-13ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಿದ್ದು, ಈ ಆಯವ್ಯಯಕ್ಕೆ ಕೆಳಕಂಡ ಮಾರ್ಪಾಡಿನೊಂದಿಗೆ ಪ್ರಸ್ತಾವನೆಯನ್ನು ಒಪ್ಪುವುದು.

ಆಯವ್ಯಯ 2012-13 ತಿದ್ದುಪಡಿ (ಸ್ವೀಕೃತಿಗಳು)

| ಕ್ರ.ಸ. | ಪುಟ ಸಂ. | ಆಯವ್ಯಯದ ಕೋಡ್ | 2012-13 ನೇ ಸಾಲಿನ ಕರಡು ಆಯವ್ಯಯದಲ್ಲಿ ಇದ್ದದ್ದು | ಮೊತ್ತ (ರೂ. ಲಕ್ಷಗಳಲ್ಲಿ) | ಪಾಲಿಕೆ ಸಭೆಯಲ್ಲಿ ಅನುಮೋದನೆ ಪಡೆದದ್ದು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| 1 | 8 | R-0130 | ಅಭಿವೃದ್ಧಿ ಶುಲ್ಕ Improvement Charges | 75000.00 | ಅಭಿವೃದ್ಧಿ ಶುಲ್ಕ Improvement Charges | 89000.00 |

| | | | | | | |
|---|---|---|---|---|---|---|
| 2 | 9 | R-0191 | ಕೇಂದ್ರ ಸರ್ಕಾರದ ಕಟ್ಟಡಗಳ ಮೇಲಿನ ಸೇವಾ ಶುಲ್ಕ Service Charges on Central Govt. Buildings. | 1000.00 | ಕೇಂದ್ರ ಸರ್ಕಾರದ ಕಟ್ಟಡಗಳ ಮೇಲಿನ ಸೇವಾ ಶುಲ್ಕ Service Charges on Central Govt. Buildings. | 4000.00 |
| 3 | 9 | R-0193 | ತೆರಿಗೆ ರಿಯಾಯಿತ್ತಿ ಪಡೆದ ಆಸ್ತಿಗಳ ಮೇಲೆ ಸೇವಾ ಶುಲ್ಕ Service Charges on Tax exempted properties. | 1000.00 | ತೆರಿಗೆ ರಿಯಾಯಿತ್ತಿ ಪಡೆದ ಆಸ್ತಿಗಳ ಮೇಲೆ ಸೇವಾ ಶುಲ್ಕ Service Charges on Tax exempted properties. | 4000.00 |
| 4 | 11 | R-0175 | ಅಂಗಡಿ/ವಾಣಿಜ್ಯ ಸಂಕೀರ್ಣ ಗಳಿಂದ ಬಾಡಿಗೆ Rent from Shops/ Commercial Complexes. | 3000.00 | ಅಂಗಡಿ/ವಾಣಿಜ್ಯ ಸಂಕೀರ್ಣ ಗಳಿಂದ ಬಾಡಿಗೆ Rent from Shops/ Commercial Complexes. | 6000.00 |
| 5 | 13 | R-0205 | ಖಾಸಗಿ ಜಮೀನುಗಳಲ್ಲಿ ಅಳವಡಿಸಿದ ಜಾಹೀರಾತು ಫಲಕಗಳಿಂದ ತೆರಿಗೆ Advt. Taxes on Hoarding on Pvt. Land. | 6100.00 | ಖಾಸಗಿ ಜಮೀನುಗಳಲ್ಲಿ ಅಳವಡಿಸಿದ ಜಾಹೀರಾತು ಫಲಕಗಳಿಂದ ತೆರಿಗೆ Advt. Taxes on Hoarding on Pvt. Land. | 9100.00 |
| 6 | 16 | R-0109 | ಕಟ್ಟಡ ಲೈಸೆನ್ಸ್ ಶುಲ್ಕ Building Licence Fee. | 15000.00 | ಕಟ್ಟಡ ಲೈಸೆನ್ಸ್ ಶುಲ್ಕ Building Licence Fee. | 20000.00 |
| 7 | 17 | R-0139 | ಉಪಾಹಾರ ಗೃಹಗಳ ಶುಲ್ಕ Hotel and Restaurant Fee | 5000.00 | ಉಪಾಹಾರ ಗೃಹಗಳ ಶುಲ್ಕ Hotel and Restaurant Fee | 6000.00 |
| 8 | 25 | R-1033 | ಡಕ್ಟ್ ಸರ್ವಿಸ್/ಓ.ಎಫ್.ಸಿ. ಶುಲ್ಕ Duct Services/OFC Charges. | 50000.00 | ಡಕ್ಟ್ ಸರ್ವಿಸ್/ಓ.ಎಫ್.ಸಿ. ಶುಲ್ಕ Duct Services/OFC Charges. | 60000.00 |
| 9 | 25 | R-0160 | ರಸ್ತೆ ಕತ್ತರಿಸುವ ಮತ್ತು ಸರಿಪಡಿಸುವ ಶುಲ್ಕಗಳು Road Cutting & Restoration Charges | 1500.00 | ರಸ್ತೆ ಕತ್ತರಿಸುವ ಮತ್ತು ಸರಿಪಡಿಸುವ ಶುಲ್ಕಗಳು Road Cutting & Restoration Charges | 3500.00 |
| | | | | 157600.00 | | 201600.00 |

- ಕೇಂದ್ರ ಸರ್ಕಾರದ ಎಲ್ಲಾ ಕಟ್ಟಡಗಳು ಹಾಗೂ ತೆರಿಗೆ ವಿನಾಯಿತಿ ಪಡೆದಿರುವ ಕಟ್ಟಡಗಳ ಸೇವಾ ಶುಲ್ಕವನ್ನು ಶೇ.25 ರಿಂದ 50ಕ್ಕೆ ಏರಿಸಲಾಗುವುದು.
- **OFC Cable** ಗೆ ಸಂಬಂಧಿಸಿದಂತೆ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗೆದ ರಸ್ತೆಯನ್ನು ದುರಸ್ಥಿಪಡಿಸಲು ಈಗಿನ ಪ್ರತಿ ಮೀಟರ್‌ಗೆ ರೂ.300.00 ರಿಂದ ರೂ.600.00ಕ್ಕೆ ಹೆಚ್ಚಿಸಲಾಗುವುದು.
- ಕಟ್ಟಡ ಪರವಾನಗಿ ಶುಲ್ಕವನ್ನು ಗರಿಷ್ಠ ಶೇ 50ಕ್ಕೆ ಮಿತಿಗೊಳಿಸಿ ಹೆಚ್ಚಿಸಲಾಗುವುದು.
- ಪಾಲಿಕೆಯ ಆಸ್ತಿಗಳು ಅಂಗಡಿ/ಮಳಿಗೆಗಳ ಗುತ್ತಿಗೆ ಅವಧಿ (**Lease**) ಮೇಲಿನ ಬಾಡಿಗೆಯನ್ನು ಈಗ ಹಾಲಿ ಇರುವ ದರಗಳಿಗಿಂತ ಶೇ.100ರಷ್ಟು ಹೆಚ್ಚಿಸಲಾಗುವುದು.
- ಆಟದ ಮೈದಾನಗಳನ್ನು ಕ್ರೀಡೆಯೇತರ ಚಟುವಟಿಕೆಗಳಿಗೆ ನೀಡಿದಲ್ಲಿ ರೂ.25000/- ರಿಂದ ರೂ.50000/-ರವರೆಗೆ ಹೆಚ್ಚಿಸಲಾಗುವುದು.

| | | | |
|---|---|---|---|
| 13 | 198 | ಕನಕ ಭವನ ನಿರ್ಮಾಣಕ್ಕಾಗಿ | 100.00 |
| 14 | 182 | ಸಂಗೊಳ್ಳಿ ರಾಯಣ್ಣ ಭವನ ನಿರ್ಮಾಣಕ್ಕಾಗಿ | 150.00 |
| 15 | 163 | ವಾರ್ಡ್ ಅಭಿವೃದ್ಧಿ ಕಾಮಗಾರಿ | 500.00 |
| 16 | 181 | ಕುಮಾರಸ್ವಾಮಿ ಬಡಾವಣೆಯಲ್ಲಿ ಶ್ರೀ ಬೀರೇಶ್ವರ ಭವನ ನಿರ್ಮಾಣ | 50.00 |
| 17 | 163 | ಕಾಮಾಕ್ಯ ಜಂಕ್ಷನ್‌ನಿಂದ ಜನತಾ ಬಜಾರ್ ರಿಂಗ್ ರಸ್ತೆ (ಬಲಭಾಗ) ವರೆಗಿನ ಪಾದಚಾರಿ ಅಭಿವೃದ್ಧಿಗೆ | 200.00 |
| 18 | 160 | ಆರ್.ಎನ್.ಎಸ್. ಕಾಲೇಜ್ ಜಂಕ್ಷನ್ ನಿಂದ ಇಂಡೋ ಅಮೆರಿಕನ್‌ವರೆಗಿನ ಉತ್ತರಹಳ್ಳಿ–ಚನ್ನಸಂದ್ರ ಮುಖ್ಯರಸ್ತೆ ಅಭಿವೃದ್ಧಿಗೆ | 200.00 |
| 19 | 67 | ವಾರ್ಡ್ ವ್ಯಾಪ್ತಿಯಲ್ಲಿ ಎಲ್.ಎ.ಡಿ. ಲೈಟ್‌ಗಳನ್ನು ಅಳವಡಿಸಲು | 100.00 |
| 20 | | ಹಕ್ಕಬುಕ್ಕರ ಪ್ರತಿಮೆ ಸ್ಥಾಪನೆಗೆ | 100.00 |
| | | | 3835.00 |

## ನಿರ್ಣಯ: 'ಇ'

ದಿನಾಂಕ:28–06–2012 ರಂದು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಂಡಿಸಿದ 2012–13ನೇ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದ್ದ ಪಾಲಿಕೆ ಬಜಾರ್‌ಗಳಿಗೆ ಸೂಕ್ತವಾದ ಸ್ಥಳವನ್ನು ಗುರುತಿಸಿ, (ನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಪಾಲಿಕೆ ಸ್ಥಳದಲ್ಲಿ) ಸ್ಥಳೀಯ ನಗರ ಪಾಲಿಕೆ ಸದಸ್ಯರ ಅವಗಾಹನೆಗೆ ತಂದು ಪಾಲಿಕೆ ಬಜಾರ್‌ಗಳನ್ನು ಸ್ಥಾಪಿಸುವುದೆಂದು ತೀರ್ಮಾನಿಸಲಾಯಿತು.

## ನಿರ್ಣಯ: 'ಎಫ್'

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಂತ ಸಂಪನ್ಮೂಲಗಳಿಂದ ಕೈಗೊಳ್ಳಲಾಗುವ ಯಾವುದೇ ಮೊತ್ತದ ಯೋಜನೆ/ಕಾಮಗಾರಿಗಳನ್ನು ಸರ್ಕಾರದ ಅನುಮತಿಯನ್ನು ನಿರೀಕ್ಷಿಸದೇ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 195/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ Optical Fibre Cable ಗಳನ್ನು ಅಳವಡಿಸಲು ಹೆಚ್.ಡಿ.ಡಿ. ವಿಧಾನದಲ್ಲಿ ಅನುಮತಿ ನೀಡಲು ಹಾಲಿ ವಿಧಿಸುತ್ತಿರುವ ದರಗಳ ಬದಲಾಗಿ ಹೆಚ್ಚಿನ ಶುಲ್ಕವನ್ನು ವಿಧಿಸುವ ಬಗ್ಗೆ ತೆರೆದ ಗುಂಡಿ ವಿಧಾನದ Protocol ಗಾಗಿ ದಿನಾಂಕ:31-08-2006 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಪ್ರಥಮ ಸಭೆಯನ್ನು ನಡೆಸಿ, ಅದರಲ್ಲಿ ಹೆಚ್.ಡಿ.ಡಿ./ತೆರೆದ ಗುಂಡಿ ಮಾದರಿಗಳಿಗೆ ಅನುಮತಿ ನೀಡಲು ವಿಧಿಸಬೇಕಾದ ಕಟ್ಟುಪಾಡುಗಳನ್ನು, ಶುಲ್ಕದ ವಿವರಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಮುಖ್ಯವಾಗಿ, ಎಲ್ಲಾ ಸರ್ಕಾರಿ ಸಂಸ್ಥೆಗಳ ಮತ್ತು ಖಾಸಗಿ ಸಂಸ್ಥೆಗಳ Cable operator ಗಳಿಗೆ ಗುಂಡಿ ಒಂದಕ್ಕೆ ರೂ.10,000/- (ಹಿಂದಿರುಗಿಸಲಾಗದ) ಶುಲ್ಕ ವಿಧಿಸುವುದು. ಬಳಿಕ ಕೆಲಸ ಪೂರ್ಣಗೊಂಡ ನಂತರ ಆ ಸಂಸ್ಥೆಗಳು ಗುಂಡಿಯನ್ನು ತಮ್ಮದೇ ಖರ್ಚಿನಿಂದ ಯಥಾಸ್ಥಿತಿಗೆ ಬರುವಂತೆ ಮಾಡುವುದು. ಮೇಲ್ಕಂಡ ಕಾರ್ಯಸೂಚಿಯಂತೆ ಅಧೀಕ್ಷಕ ಅಭಿಯಂತರರು, ರಸ್ತೆ ಅಗಲೀಕರಣದವರ ವತಿಯಿಂದ ನಿಗಧಿತ ಶುಲ್ಕ ರೂ.10000+500 ಪಡೆದು ತೆರೆದ ಗುಂಡಿ ವಿಧಾನದಲ್ಲಿ ಕಾರ್ಯನಿರ್ವಹಿಸಲು ಅನುಮತಿ ಪತ್ರ ನೀಡಲಾಗುತ್ತಿತ್ತು. ತದನಂತರ ನವೆಂಬರ್ 2007 ರಲ್ಲಿ ತೆರೆದ ಗುಂಡಿ ಕೆಲಸಗಳಿಗಾಗಿ ಅನುಮತಿ ನೀಡಲಿಕ್ಕಾಗಿಯೇ ಡಕ್ಟ್ ವಿಭಾಗವನ್ನು ಸೃಜಿಸಲಾಯಿತು. ಈ ವಿಭಾಗದಿಂದಲೂ ಸಹ ರೂ.10,500/- ಪ್ರತಿ ಗುಂಡಿಗೆ ಅಥವಾ ರೂ.95/-Rmtr (ಯಾವುದೂ ಅಧಿಕವೋ) ರಂತೆ ಮತ್ತು ಶೇ.25 ರಷ್ಟು ಭದ್ರತಾ ಠೇವಣಿ (ಮೂರು ವರ್ಷಗಳ ನಂತರ ಹಿಂತಿರುಗಿಸುವುದು) ಪಾವತಿಸಿಕೊಂಡು ಅನುಮತಿ ಪತ್ರ ನೀಡಲಾಗುತ್ತಿತ್ತು. ತದನಂತರ ಮಾನ್ಯ ಆಯುಕ್ತರ ಆದೇಶ ಸಂಖ್ಯೆ:ಪಿಎಸ್‌ಆರ್/7511/09-10 ದಿನಾಂಕ:19-02-10 ರಂತೆ ಹಾಗೂ ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಆದೇಶ ಪತ್ರ ದಿನಾಂಕ:31-03-10 ರಂತೆ ಆಯಾ ವಲಯದ ಅಪರ/ಜಂಟಿ ಆಯುಕ್ತರ ಮಟ್ಟದಲ್ಲೇ ರಸ್ತೆ ಅಗೆತಕ್ಕೆ ಅನುಮತಿ ನೀಡುವುದು ಸೂಕ್ತವೆಂದು ನಿರ್ಧರಿಸಿ ಉಲ್ಲೇಖಿತ ಪತ್ರದಲ್ಲಿ ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜನೆ ಮಾಡಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ Optical Fibre Cable ಗಳನ್ನು ಅಳವಡಿಸಲು ಸರ್ಕಾರಿ ಸಂಸ್ಥೆಗಳಾದ ಬಿ.ಎಸ್.ಎನ್.ಎಲ್., ಬೆಸ್ಕಾಂ, ಬಿಡಬ್ಲ್ಯೂ.ಎಸ್.ಎಸ್.ಬಿ., ಕೆ.ಪಿ.ಟಿ.ಸಿ.ಎಲ್ ಮತ್ತು ಖಾಸಗಿ ಸಂಸ್ಥೆಗಳಾದ ಟಾಟಾ ಕಮ್ಯೂನಿಕೇಷನ್ಸ್, ಭಾರತಿ ಏರ್‌ಟೆಲ್, ವೋಡಾಫೋನ್, ರಿಲಾಯನ್ಸ್, ಐಡಿಯಾ, ಟಾಟಾ ಟೆಲಿಸರ್ವಿಸಸ್ ಮತ್ತು ಮುಂತಾದ ಖಾಸಗಿ ಸಂಸ್ಥೆಗಳು ಕೇಬಲ್ ಅಳವಡಿಸಲು ಹೆಚ್.ಡಿ.ಡಿ. ವಿಧಾನದಲ್ಲಿ ಅನುಮತಿ ನೀಡಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರ ನಗರ ಕಾರ್ಯ ಸಲಹೆಗಾರರ ಆದೇಶದಂತೆ, ಗುಂಡಿ ತೆಗೆಯಲು ಕ್ರೋಢಿಕೃತ (consolidated) ದರ ರೂ.15,000/-(ಭದ್ರತಾ ಠೇವಣಿ ಇಲ್ಲದೆ)/ಗುಂಡಿಯನ್ನು ನಿಗಧಿಪಡಿಸಿ ದಿನಾಂಕ:23/02/10 ರಂದು ಮಾನ್ಯ ಆಯುಕ್ತರಿಂದ ಮತ್ತು ವಿಶೇಷ ಆಯುಕ್ತರಿಂದ

..........................2

ಮಂಜೂರಾತಿ ಪಡೆಯಲಾಯಿತು. ಅದರಂತೆ, ಮಂಜೂರಾತಿ ನಂತರದ ಪರವಾನಗಿ ಪತ್ರಗಳಿಗೆ ರೂ.15,000/- ಗಳಂತೆ ದರ ವಿಧಿಸಲಾಯಿತು. ಈ ಸಂಸ್ಥೆಗಳು ಪರವಾನಗಿ ಪಡೆದ ನಂತರ ಕಾರ್ಯನಿರ್ವಹಿಸುವಾಗ, ಅನುಮತಿ ನೀಡಿರುವ ಮಿತಿಯನ್ನು ಮೀರಿ ಗುಂಡಿಗಳನ್ನು ಅಗೆದಿರುವುದು, ನೀರಿನ ಹಾಗೂ ನಿರ್ಮಲೀಕರಣ ಪೈಪ್‌ಗಳಿಗೆ ಹಾನಿ ಉಂಟು ಮಾಡಿರುವುದು ಹಾಗೂ ಕೆಲವೊಂದು ಸಂದರ್ಭದಲ್ಲಿ ಮ್ಯಾನ್ ಹೋಲ್ ಮೂಲಕ ಕೇಬಲ್ ಅಳವಡಿಸಿರುವುದು ಕಂಡು ಬಂದಿರುತ್ತದೆ. ಅಗೆದಿರುವ ಗುಂಡಿಗಳನ್ನು ಮೂಲ ಸ್ಥಿತಿಗೆ ತರಲು ವಿಫಲರಾಗಿ, ಪರವಾನಿಗೆಯಲ್ಲಿ ನೀಡಿರುವ ಷರತ್ತುಗಳನ್ನು ಸರಿಯಾಗಿ ಪಾಲಿಸಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿ ಅಪಘಾತಗಳು ಸಂಭವಿಸಿ ಸಂಚಾರಕ್ಕೆ ಅಡಚಣೆಯಾಗಿರುತ್ತದೆ ಹಾಗೂ ರಸ್ತೆಯ structure ಗೆ ಹಾನಿಯಾಗಿರುತ್ತದೆ. ಇವುಗಳ ದುರಸ್ತಿ ಕಾರ್ಯವನ್ನು ಸಹ ಪಾಲಿಕೆಯೇ ಭರಿಸಬೇಕಾಗಿರುತ್ತದೆ.

ಪ್ರಸ್ತುತ ದರಗಳನ್ನು 2006-07 ನೇ ಸಾಲಿಗೆ ದರ ಹೋಲಿಕೆ ಮಾಡಿದಾಗ, ಈಗಾಗಲೇ ಸುಮಾರು ನಾಲ್ಕು ವರ್ಷಗಳಿಂದ ಇಲ್ಲಿಯವರೆಗೆ ಲೋಕೋಪಯೋಗಿ ಎಸ್.ಆರ್ ದರಗಳು ಹಾಗೂ ಮಾರುಕಟ್ಟೆಯಲ್ಲಿ ಬಿಟುಮಿನ್ ಮತ್ತು ಇತರ ರಿಪೇರಿ ಕಚ್ಚಾ ವಸ್ತುಗಳು ಪರಿಷ್ಕರಣೆಗೊಂಡು ಮೂರ್‍ನಾಲ್ಕು ಪಟ್ಟು ಏರಿಕೆಯಾಗಿರುವುದರಿಂದ ಮತ್ತು ಓ.ಇಫ್.ಸಿ. ಕೇಬಲ್ ಅಳವಡಿಸಲು ಸಿಕ್ಕಪಟ್ಟೆ ರಸ್ತೆ ಅಗೆಯುವುದರ ಮೇಲೆ ಅಲ್ಪಮಟ್ಟದಲ್ಲಿ ನಿರ್ಬಂಧನೆಗಳನ್ನು ಹೇರಲು ಅನುವಾಗುವ ದೃಷ್ಟಿಯಿಂದ ಗುಂಡಿಗಳ ಅಗೆತಕ್ಕೆ ನಿಗಧಿಪಡಿಸಿರುವ ದರಗಳನ್ನು ಹಾಗೂ ಅಗೆತಕ್ಕೆ ಪ್ರತಿ Rmtr ಗೆ ನಿಗಧಿಪಡಿಸಿರುವ ದರಗಳನ್ನು ಈ ಕೆಳಕಂಡಂತೆ ಪರಷ್ಕರಿಸಿದೆ.

| ಕ್ರಸಂ. | ವಿವರಗಳು | 2006-07 ರಲ್ಲಿ ನಿಗಧಿಪಡಿಸಿದ ದರಗಳು | 2009-10 ರಲ್ಲಿ ನಿಗಧಿಪಡಿಸಿದ ದರಗಳು | ಹಾಲಿ ನಿಗಧಿಪಡಿಸಿರುವ ದರಗಳು |
|---|---|---|---|---|
| 1 | 1.20 ಮೀx1.0 ಮೀ ಪ್ರತಿ ಗುಂಡಿಗೆ | ರೂ.10,500/- ಪ್ರತಿ ಹೆಚ್.ಡಿ.ಡಿ. ಗುಂಡಿಗೆ | ರೂ.15,000 ಪ್ರತಿ ಹೆಚ್.ಡಿ.ಡಿ. ಗುಂಡಿಗೆ | ರೂ.30,000/- ಪ್ರತಿ ಹೆಚ್.ಡಿ.ಡಿ. ಗುಂಡಿಗೆ |
| 2 | ಹೆಚ್.ಡಿ.ಡಿ. ಪಿಟ್ ಪ್ರತಿ Rmtr ಗೆ | ರೂ.95/- Rmtr ಗೆ | ರೂ.135/- Rmtr ಗೆ | ರೂ.300/- Rmtr ಗೆ |
| 3 | ಭದ್ರತಾ ಠೇವಣಿ ಮೂರು ವರ್ಷದ ಅವಧಿ ನಂತರ ಹಿಂತಿರುಗಿಸುವುದು | 25% ಮೂರು ವರ್ಷದ ಅವಧಿಗೆ | --- | 25% ಎರಡು ವರ್ಷದ ಅವಧಿಗೆ |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸುವ ವಿಧನ (ಹೆಚ್.ಡಿ.ಡಿ) ಕ್ಕೆ ಪ್ರತಿ ಗುಂಡಿಗೆ ರೂ.30,000/- ಅಥವಾ ಪ್ರತಿ ಮೀಟರ್‌ಗೆ ರೂ.300/- ಗಳನ್ನು (ಯಾವುದು ಅಧಿಕವೋ) ಅದರಂತೆ ಶುಲ್ಕ ವಿಧಿಸಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿ.

.........................3

13

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (33)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:18-05-2011 ನೀಡಲಾದ ಆದೇಶದಂತೆ, ಓ.ಎಫ್.ಸಿ. ಕೇಬಲ್ ನಿರ್ವಹಣೆ ಕುರಿತಂತೆ ಈ ಕೆಳಕಂಡ ಸದಸ್ಯರೊಂದಿಗೆ ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಲಾಗಿದೆ.

1) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಶ್ರೀ. ಎನ್.ಆರ್.ರಮೇಶ್, ಸದಸ್ಯರು, ವಾರ್ಡ್ 167, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
3) ಮುಖ್ಯ ಅಭಿಯಂತರರು, ಪೂರ್ವ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
4) ಮಾನ್ಯ ಆಯುಕ್ತರ ತಾಂತ್ರಿಕ ಸಲಹೆಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
5) ತಾಂತ್ರಿಕ ಸಲಹೆಗಾರರು, ಮಾಹಿತಿ ತಂತ್ರಜ್ಞಾನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕಂಡ ಸದಸ್ಯರುಗಳನ್ನೊಳಗೊಂಡ ಕಮಿಟಿಯು ದಿನಾಂಕ:19-05-2011 ರಂದು ಮಾನ್ಯ ಆಯುಕ್ತರ ತಾಂತ್ರಿಕ ಸಲಹೆಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿಯಲ್ಲಿ ಸಭೆ ಸೇರಿ ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ಅನುಸರಿಸುತ್ತಿರುವ ಕಾರ್ಯ ವಿಧಾನಗಳನ್ನು ಕೂಲಂಕುಶವಾಗಿ ಚರ್ಚಿಸಿ ಈ ಕೆಳಕಂಡಂತೆ ಕಾರ್ಯ ತಂತ್ರವನ್ನು ಅಳವಡಿಸಲು ಶಿಫಾರಸ್ಸು ಮಾಡಲಾಯಿತು.

- ಪ್ರಸ್ತುತ ಅಂತರ್‌ಜಾಲ/ದೂರವಾಣಿ ಮತ್ತಿತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಕಳೆದ ಹತ್ತು ವರ್ಷಗಳಿಂದ ಬೆಂಗಳೂರು ಮಹಾನಗರದಲ್ಲಿ ಅಳವಡಿಸಿರುವ ಕೇಬಲ್‌ಗಳ ವಿವರಗಳನ್ನು 15 ದಿನಗಳ ಕಾಲಾವಕಾಶ ನೀಡಿ ಸದರಿ ಸಂಸ್ಥೆಗಳಿಂದ ಪಡೆಯುವುದು.

- ಈ ಪ್ರಕಾರವಾಗಿ ವಿವರಗಳನ್ನು ದೃಢೀಕೃತ ಪ್ರಮಾಣ ಪತ್ರದ ಮೂಲಕ ಪಡೆಯುವುದರಿಂದ ಸದರಿ ಸಂಸ್ಥೆಗಳು ಅಧಿಕೃತ ಹಾಗೂ ಅನಧಿಕೃತವಾಗಿ ಕೇಬಲ್‌ಗಳನ್ನು ಅಳವಡಿಸಿರುವ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

- ಈ ಪ್ರಮಾಣ ಪತ್ರದಲ್ಲಿ ಸಂಸ್ಥೆಯು ಯಾವುದೇ ಸಂಸ್ಥೆಯ ಕೇಬಲ್‌ಗಳನ್ನು ಅನಧಿಕೃತವಾಗಿ ಅಳವಡಿಸಿದ್ದಲ್ಲಿ ಶೇಕಡ 300% ರಷ್ಟು (@ ರೂ.900/- ಪ್ರತಿ ಮೀಟರ್‌ಗೆ) ವಸೂಲಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎಲ್ಲಾ ರೀತಿಯ ಅಧಿಕಾರವಿರುತ್ತದೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಯಾವುದೇ ಸತ್ಯ ಮಾಹಿತಿಯನ್ನು ಮರೆಮಾಚಿದ್ದಲ್ಲಿ ಅಂತಹ ಕೇಬಲ್‌ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮುಟ್ಟುಗೋಲು ಹಾಕಿಕೊಂಡು ಕಾನೂನಿನ್ವಯ ಕಠಿಣ ಕ್ರಮ ಹಾಗೂ ಹೆಚ್ಚಿನ ದಂಡವನ್ನು ವಿಧಿಸಬಹುದಾಗಿರುತ್ತದೆ.

- ದಿನಾಂಕ:07-02-2011 ರಿಂದ ದಿ:28-02-2011 ರ ನಡುವಿನ ಅವಧಿಯಲ್ಲಿ ಯಾವುದೇ ರೀತಿಯ ಅನುಮತಿಯನ್ನು (ಅಂದರೆ ಪ್ರತಿ ಗುಂಡಿಗೆ ರೂ.15,000 ದರ ನಿಗಧಿಪಡಿಸಿ) ನೀಡಿದ್ದಲ್ಲಿ ತತ್‌ಕ್ಷಣ ರದ್ದುಗೊಳಿಸಿ ಹಿಂಪಡೆಯಬೇಕಾಗಿರುತ್ತದೆ.

.....................2

- ಒಂದು ವೇಳೆ ಈ ಅವಧಿಯಲ್ಲಿ ಅನುಮತಿ ಪಡೆದಿರುವ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಲ್ಲಿ ಸಂಬಂಧಪಟ್ಟ ಓ.ಎಫ್.ಸಿ. ಸಂಸ್ಥೆ ಅಥವಾ ಗುತ್ತಿಗೆದಾರರಿಂದ ಮಾನ್ಯ ಕೌನ್ಸಿಲ್‌ನಿಂದ ಅನುಮೋದಿತವಾದ ಹೊಸ ದರದಂತೆ ರೂ.300 ಪ್ರತಿ ಮೀಟರ್‌ಗೆ ವಸೂಲಿ ಮಾಡಲು ಮೂಲ ಕಡತವನ್ನು ಪ್ರಧಾನ ಅಭಿಯಂತರರಿಗೆ ಕಳುಹಿಸಿ. ಓ.ಎಫ್.ಸಿ ಸಂಸ್ಥೆಯವರಿಗೆ ಅನುಮತಿಗಾಗಿ ಪ್ರಧಾನ ಅಭಿಯಂತರರ ಕಛೇರಿಗೆ ಬೇಟಿ ಮಾಡಲು ಸೂಚಿಸಬೇಕು.

- ಸದರಿ ಓ.ಎಫ್.ಸಿ ಸಂಸ್ಥೆಯವರು ಕಳೆದ ಹತ್ತು ವರ್ಷದಿಂದ ತಹಲ್‌ವರೆಗೆ ಪಾವತಿಸಿರುವ ಆದಾಯ ತೆರಿಗೆ, ವಾಣಿಜ್ಯ ತೆರಿಗೆ, ಸೇವಾ ತೆರಿಗೆ ಹಾಗೂ ಸರ್ಕಾರದ ಇತರೆ ತೆರಿಗೆಗಳನ್ನು ಪಾವತಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ವರದಿ ಹಾಗೂ ಸಂಪೂರ್ಣ ವಿವರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

- ಓ.ಎಫ್.ಸಿ ಸಂಸ್ಥೆಗಳು ಪಾಲಿಕೆಗೆ ಸಲ್ಲಿಸಿದ ಮೇಲ್ಕಂಡ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಒಂದು ಸ್ವತಂತ್ರ ತಂಡವನ್ನು ಟಿ.ವಿ.ಸಿ.ಸಿ ವಿಭಾಗದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲು ರಚಿಸಬೇಕಾಗಿರುತ್ತದೆ ಹಾಗೂ ಇನ್ನೊಂದು ತನಿಖಾ/ಪರಿಶೀಲನಾ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸೂಕ್ತ ಅಧಿಕಾರ ಪ್ರತ್ಯೋಜನೆಯನ್ನು ಮಾಡಲು ಸೂಚಿಸಬಹುದಾಗಿರುತ್ತದೆ ಹಾಗೂ ಈ ವಿವರಗಳನ್ನು ಪರಿಶೀಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೂ ಸಹ ವಿಭಾಗ/ಉಪ ವಿಭಾಗವಾರು ಮಟ್ಟದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳ ನೇತೃತ್ವದಲ್ಲಿಯೂ ಸಹ ತಂಡಗಳನ್ನು ರಚಿಸಿ ಅವರ ವ್ಯಾಪ್ತಿಯಲ್ಲಿ ಈ ಸಂಬಂಧಪಟ್ಟ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ಸೂಕ್ತ ಆದೇಶ ನೀಡಬಹುದಾಗಿರುತ್ತದೆ.

- ಈ ತಂಡದ ವಲಯಕ್ಕೆ ಒಂದರಂತೆ ವಾಹನಗಳನ್ನು, GPS ಯಂತ್ರ ಹಾಗೂ ವೈಯರ್‌ಲೆಸ್ ಸಾಧನದೊಂದಿಗೆ ಸೂಕ್ತ ತಾಂತ್ರಿಕ ಹಾಗೂ ಭದ್ರತಾ ಸಿಬ್ಬಂದಿಯೊಂದಿಗೆ ಸಂಚರಿಸಿ ಅನಧಿಕೃತ ರಸ್ತೆ ಅಗೆತ ಹಾಗೂ ರಸ್ತೆಗಳ ಮೇಲೆ ಅನಧಿಕೃತವಾಗಿ ಮಣ್ಣು ಹಾಗೂ ಕಟ್ಟಡದ ಅವಶೇಷಗಳನ್ನು ತಂದು ಹಾಕುವವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬಹುದಾಗಿರುತ್ತದೆ.
- ಕೌನ್ಸಿಲ್ ನಿರ್ಣಯದಂತೆ, ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸುವ ಪ್ರಸ್ತಾವನೆಗಳು ವಿಶೇಷ ಆಯುಕ್ತರಿಂದ ಅನುಮೋದನೆಗೊಂಡ ನಂತರ ಪ್ರಧಾನ ಅಭಿಯಂತರರಿಂದ ಕೇಬಲ್‌ಗಳನ್ನು ಅಳವಡಿಸಲು ಅನುಮತಿಯನ್ನು ನೀಡಲು ಸೂಚಿಸಬಹುದಾಗಿರುತ್ತದೆ.

1) ಈ ವ್ಯವಸ್ಥೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಹುದೊಡ್ಡ ಸಮಸ್ಯೆಯಾಗಿರುವ ರಸ್ತೆ ಅಗೆತದ ಕೆಲಸದ ಮೇಲೆ ಸಹ ನಿಯಂತ್ರಣ ಹಾಗೂ ವಿವರಗಳನ್ನು ಪಡೆದಂತಾಗುತ್ತದೆ. ಇದೇ ತರಹದ ವ್ಯವಸ್ಥೆಯು ಪ್ರಸ್ತುತ ಗುಜರಾತ್ ರಾಜ್ಯದ ಅಹಮದಬಾದ್ ನಗರದಲ್ಲಿ ಜಾರಿಯಲ್ಲಿದೆ. ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒಂದು ತಂಡವು ಭೇಟಿ ಮಾಡಿ, ಪಾಲಿಕೆಯಲ್ಲಿಯೂ ಸಹ ಇದನ್ನು ಅಳವಡಿಸಲು ಸೂಕ್ತ ಕಾರ್ಯ ತಂತ್ರವನ್ನು ಅಳವಡಿಸಿಕೊಂಡಲ್ಲಿ ಸಹಕಾರಿಯಾಗುತ್ತದೆ.

2) ಇದಲ್ಲದೆ ರಸ್ತೆ ಅಗೆತದ, ಅಂದರೆ ಕೇಬಲ್ ಅಳವಡಿಕೆ ಸಂಬಂಧಪಟ್ಟ ಪರವಾನಿಗೆಗಳನ್ನು ನೀಡುವಾಗ ಆನ್ ಲೈನ್ ವ್ಯವಸ್ಥೆಯ ಮುಖಾಂತರ ನೀಡಬೇಕೆಂದು ಕಡ್ಡಾಯ ಮಾಡಿದ್ದಲ್ಲಿ ಇದರ ಮಾಹಿತಿಯು ಎಲ್ಲಾ ವಲಯದ ಅಭಿಯಂತರುಗಳಿಗೆ ಏಕ ಕಾಲದಲ್ಲಿ ಲಭ್ಯವಿರುತ್ತದೆ. ಇದರಿಂದ

.......................3

ಯಾವುದೇ ರೀತಿಯ ಅನಧಿಕೃತ ಕೇಬಲ್ ಅಳವಡಿಸುವ ಕಾರ್ಯವನ್ನು ತಡೆಗಟ್ಟಲು ಹಾಗೂ ಪಾಲಿಕೆಯಲ್ಲಿ ಈ ಕೆಲಸದ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ.

3) ಪ್ರಸ್ತುತ ಪ್ರಸ್ತಾವನೆಯಲ್ಲಿ ಪ್ರತಿ ಮೀಟರ್‌ಗೆ ರೂ.300/- ಅನ್ನು (ಕೇಬಲ್ ಅಳವಡಿಸಲು) ಆರಂಭಿಕ ವೆಚ್ಚವೆಂದು ಸಂಬಂಧಪಟ್ಟ ಏಜೆನ್ಸಿಗಳು ಪಾಲಿಕೆಗೆ ಕೇಬಲ್ ಅಳವಡಿಕೆಗೆ ಮುಂಚೆ ಪಾವತಿ ಮಾಡಬೇಕಾಗುತ್ತದೆ. ಆದರೆ, ಈ ಭೂಗತ ಕೇಬಲ್‌ಗಳು ಭೂಮಿಯೊಳಗೆ ಶಾಶ್ವತವಾಗಿ ಅಳವಡಿಸುವುದರಿಂದ ಪಾಲಿಕೆಯು ಸದರಿ ಜಾಗವನ್ನು ಯಾವುದೇ ರೀತಿಯ ಅನ್ಯ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಸದರಿ ಜಾಗಕ್ಕೆ ಪಾಲಿಕೆಯು ಈ ಏಜೆನ್ಸಿಗಳ ಮೇಲೆ ಮಾಸಿಕ ಬಾಡಿಗೆಯನ್ನು ಅತಿ ಕಡಿಮೆ ದರದಲ್ಲಿ ಅಂದರೆ ರೂ.120/- ಪ್ರತಿ ಮೀಟರ್‌ಗೆ ಮಾಹೆಯಾನ ವಿಧಿಸಬಹುದಾಗಿರುತ್ತದೆ. ಈ ಮಾಸಿಕ ಬಾಡಿಗೆಯನ್ನು ವರ್ಷದ ಪ್ರಾರಂಭದಲ್ಲಿಯೇ ವರ್ಷ ಪೂರ್ತಿ ಮುಂಚಿತವಾಗಿ ಪಡೆಯಲು ಸೂಕ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಕೆಲವು ಕಡೆ ಕೋರ್ ಕಮಿಟಿಯ ಸದಸ್ಯರ ಗಮನಕ್ಕೆ ಬಂದ ವಿಷಯದ ಆಧಾರದ ಮೇಲೆ ಸದರಿ ಸಂಸ್ಥೆಗಳು ತಮ್ಮ ಗ್ರಾಹಕರಿಗೆ ಪ್ರತಿ ಮೀಟರ್‌ಗೆ 100 ರಿಂದ 140 ರವರೆಗೆ ವಿಧಿಸುತ್ತಿರುವ ಅನೇಕ ನಿದರ್ಶನಗಳಿದ್ದು, ಇದನ್ನು ಜಾರಿಗೊಳಿಸಿದಲ್ಲಿ ಪಾಲಿಕೆಯ ಆದಾಯವು ಗಮನಾರ್ಹವಾಗಿ ಹೆಚ್ಚಳವಾಗುವ ಬಹಳಷ್ಟು ಸಾಧ್ಯತೆಗಳಿವೆ.

4) ಈ ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಂಡು ಪ್ರಸ್ತುತ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಿದ ನಂತರ ಪಾಲಿಕೆಯು ಶಾಶ್ವತ ಪರಿಹಾರಕ್ಕಾಗಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಇದಕ್ಕಾಗಿ ಪಾಲಿಕೆಯ ಒಂದು ಕೇಬಲ್ ಡಕ್ಟ್ ಅನ್ನು (4 ಅಡಿ ಅಗಲ 8 ಅಡಿ ಆಳ) ರಸ್ತೆಯ ಉದ್ದಗಲಕ್ಕೂ ರಸ್ತೆಯ ಮಧ್ಯ ಭಾಗದಲ್ಲಿ ಅಥವಾ ರಸ್ತೆಯ ಬದಿಯಲ್ಲಿ ನಿರ್ಮಿಸಿದ್ದಲ್ಲಿ ಈ ಕೇಬಲ್ ಅಳವಡಿಕೆಯ ಸಂಸ್ಥೆಗಳಿಗೆ ಇದರಲ್ಲಿ ಸೂಕ್ತ ಸ್ಥಳಾವಕಾಶ ಕೊಡಲು ನೆರವಾಗುತ್ತದೆ. ಇದರಿಂದ ಮುಂದಿನ ಭವಿಷ್ಯದಲ್ಲಿ ರಸ್ತೆ ಅಗೆತ ಮತ್ತು ಇತರ ಸಂಬಂಧಿತ ನಿರ್ವಹಣೆ ಕೆಲಸವನ್ನು ಬಹುತೇಕ ಕಡಿಮೆ ಮಾಡಬಹುದಾಗಿದೆ. ಈ ವ್ಯವಸ್ಥೆಯು ಅನೇಕ ಮುಂದುವರೆದ ದೇಶಗಳಲ್ಲಿ ಈಗಾಗಲೇ ಜಾರಿಯಲ್ಲಿರುತ್ತದೆ. ಈ ವ್ಯವಸ್ಥೆಯನ್ನು ತತ್‌ಕ್ಷಣದಿಂದ ಹೊಸದಾಗಿ ನಿರ್ಮಿಸುತ್ತಿರುವ ರಸ್ತೆಗಳಲ್ಲಿ ಅಥವಾ ರಸ್ತೆ ಅಗಲೀಕರಣದ ವೇಳೆ ಕೈಗೊಳ್ಳಬಹುದಾಗಿರುತ್ತದೆ.

5) ಇನ್ನು ಮುಂದೆ ಓ.ಎಫ್.ಸಿ ಕೇಬಲ್ ಅನ್ನು ಅಳವಡಿಸಲು ಪರವಾನಿಗೆಯನ್ನು ಪಡೆಯಲು ಸಂಬಂಧಪಟ್ಟ ಸಂಸ್ಥೆಯ ಪ್ರಸ್ತಾವನೆಯನ್ನು ನೇರವಾಗಿ ಕಂಪನಿಯ ಮುಖ್ಯಸ್ಥರೇ ಸಲ್ಲಿಸಬೇಕು. ಗುತ್ತಿಗೆದಾರರು/ಸಬ್ ಏಜೆನ್ಸಿಯವರ ಪರವಾನಗಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತಿಲ್ಲ.

6) ಓ.ಎಫ್.ಸಿ ಕೇಬಲ್ ಅಳವಡಿಸುವ ಸಂಸ್ಥೆಗಳಿಂದ ಸಂಪೂರ್ಣ ವಿವರಗಳನ್ನು ಪಡೆದುಕೊಂಡ ನಂತರ, ಸದರಿ ವಿವರಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಪಾಲಿಕೆಯ GIS map ನಲ್ಲಿ ಅಳವಡಿಸಬೇಕಾಗಿರುತ್ತದೆ. ಆದುದರಿಂದ, ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಮಾಹಿತಿ ತಂತ್ರಜ್ಞಾನ ವಿಭಾಗದೊಡನೆ ಒಂದು GIS ತಂಡವನ್ನು ರಚಿಸಿ, ಮಾಹಿತಿಯನ್ನು ಅಳವಡಿಸಿ ನಂತರ, ಬರುವ ಪ್ರಸ್ತಾವನೆಗಳನ್ನು Real time ಅಳವಡಿಸಲು ಸೂಕ್ತ ಕ್ರಮ ಕೈಗೊಂಡಲ್ಲಿ, ಸದರಿ ವ್ಯವಸ್ಥೆಯಲ್ಲಿಯ ಲೋಪದೋಷಗಳನ್ನು ಸರಿಪಡಿಸಿ ಪ್ರಸ್ತುತ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬಹುದಾಗಿರುತ್ತದೆ.

7) ಪ್ರಸ್ತುತ ಕೇಬಲ್ ಅಳವಡಿಕೆಯ ಪರವಾನಿಗೆಯನ್ನು ನೀಡುವ ವ್ಯವಸ್ಥೆಯನ್ನು ಇನ್ನು ಮುಂದೆ ಸೂಕ್ತ ರೀತಿಯ ತಂತ್ರಾಂಶವನ್ನು ತಯಾರು ಮಾಡಿ, ಇದನ್ನು ಆನ್ ಲೈನ್ ಮುಖಾಂತರ ನಿರ್ವಹಿಸಿದಲ್ಲಿ,

..................4

ಪಾಲಿಕೆಯ ಆದಾಯದಲ್ಲಿ ಸೋರಿಕೆಯನ್ನು ತಡೆಗಟ್ಟಲು ಸಹಾಯವಾಗುತ್ತದೆ ಹಾಗೂ ಇದರಿಂದ ಪಾಲಿಕೆಯ ಆದಾಯವು ಸಹ ಹೆಚ್ಚಳವಾಗುತ್ತದೆ. ಈ ರೀತಿಯ ತಂತ್ರಾಂಶದಲ್ಲಿ, ಸಂಬಂಧಪಟ್ಟ ಸಂಸ್ಥೆಗಳು ಪರವಾನಗಿ ಶುಲ್ಕವನ್ನು ನೇರವಾಗಿ RTGS/NEFT ರೀತಿಯಲ್ಲಿ ಪಾಲಿಕೆಯ ಖಾತೆಗೆ ನೇರವಾಗಿ ಜಮಾ ಮಾಡುವ ರೀತಿಯಲ್ಲಿ ವ್ಯವಸ್ಥೆಯನ್ನು ಜಾರಿಗೊಳಿಸಬೇಕಾಗಿರುತ್ತದೆ. ಈ ತಂತ್ರಾಂಶವನ್ನು ತಯಾರು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ (ಪ್ರಧಾನ ಅಭಿಯಂತರರ ಕಛೇರಿಯ ಸಹಯೋಗದೊಂದಿಗೆ) ನಿರ್ದೇಶನವನ್ನು ನೀಡಬಹುದಾಗಿದೆ.

8) ಮೇಲ್ಕಂಡ ಮಾಹಿತಿಯು ಓ.ಎಫ್.ಸಿ ಅಳವಡಿಸುವ ಬಗ್ಗೆ ಇದ್ದು, ಇದಲ್ಲದೆ ದೂರದರ್ಶನ ಕೇಬಲ್ ನಿರ್ವಹಣೆ (ಟಿ.ವಿ. ಕೇಬಲ್ ಆಪರೇಟರ್) ಮಾಡುವವರು ಮನೋರಂಜನೆ ತೆರಿಗೆ ಪಾವತಿಸುತ್ತಿರುವುದರಿಂದ ಪ್ರತಿಯೊಬ್ಬ ನಿರ್ವಹಣೆದಾರರು ವಾರ್ಷಿಕವಾಗಿ ಪಾಲಿಕೆಗೆ ರೂ.4,800/- (ಪ್ರತಿ ನಿರ್ವಹಣೆದಾರರು) ಪಾವತಿಸಿ ವಾರ್ಷಿಕ ಅನುಮತಿ ಪಡೆಯುವುದು.

9) ಟಿ.ವಿ. ಕೇಬಲ್ ನಿರ್ವಹಣೆದಾರರು ದೂರದರ್ಶನ ಕೇಬಲ್ ಅಲ್ಲದೆ ಅಂತರ್ಜಾಲ (ಇಂಟರ್ ನೆಟ್) ಸೌಲಭ್ಯ ಒದಗಿಸುತ್ತಿರುವುದರಿಂದ ಅಂತಹ ಸಂಸ್ಥೆಗಳು, ಓ.ಎಫ್.ಸಿ. ಸಂಸ್ಥೆಗಳಂತೆ ಪಾಲಿಕೆಗೆ ಶುಲ್ಕ ವಿಧಿಸುತ್ತಿರುವ ವ್ಯಾಪ್ತಿಗೆ ಒಳಪಡುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳಿಗೆ ಪಾಲಿಕೆಯ ಸಭೆಯ ಅನುಮೋದನೆ ಕೋರಿ ಮಂಡಿಸಿರುವ ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಪ್ರ.ವಿ.ಎಸ್.ಪಿಆರ್ (G) 10324/12-13

ಆಯುಕ್ತರ ಕಛೇರಿ
ಪಾಲಿಕೆ ಪ್ರಧಾನ ಕಛೇರಿಗಳು,
ನರಸಿಂಹ ರಾಜಾ ಚೌಕ, ಬೆಂಗಳೂರು-02
ದಿನಾಂಕ:28.02.2013.

## ಕಛೇರಿ ಆದೇಶ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಸುವುದಕ್ಕೆ ಸರ್ಕಾರಿ ಸಂಸ್ಥೆಗಳಿಗೆ ಅನುಮತಿ ನೀಡುತ್ತಿರುವಂತೆ ಖಾಸಗಿ ಓ.ಎಫ್.ಸಿ ಸೇವಾ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:-
1) ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶದ ರಿಟ್ ಪಿಟಿಷನ್ ಸಂಖ್ಯೆ:-37882-37893 of 2011(LB)BMP ಆದೇಶದ ಪ್ರತಿ.
2) ಪಾಲಿಕೆ ಸಭೆ ನಡಾವಳಿ ವಿಷಯದ ಸಂಖ್ಯೆ: 195/2010-11, ದಿನಾಂಕ: 13-01-2011.
3) ಪಾಲಿಕೆ ಸಭೆ ನಡಾವಳಿ ವಿಷಯದ ಸಂಖ್ಯೆ:3(264)/2010-11, ದಿನಾಂಕ:18.03.2011.
4) ಪಾಲಿಕೆ ಸಭೆ ನಡಾವಳಿ ವಿಷಯದ ಸಂಖ್ಯೆ: 01(33)/2011-12, ದಿನಾಂಕ:31.05.2011
5) ಪಾಲಿಕೆ ಸಭೆ ನಡಾವಳಿ ವಿಷಯದ ಸಂಖ್ಯೆ: 72(317)/2010-11, ದಿನಾಂಕ:03.03.2012.
6) ಪಾಲಿಕೆ ಸಭೆ ನಡಾವಳಿ ವಿಷಯದ ಸಂಖ್ಯೆ: 152/2012-13, ದಿನಾಂಕ: 11-07-2012.
7) ದಿನಾಂಕ: 24-11-2011 ರ ಪತ್ರಿಕಾ ಪ್ರಕಟಣೆ.
8) ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 12-07-2012 ರಂದು ನಡೆದ ಸಭೆಯ ನಡಾವಳಿಗಳು.
9) ಕೆ.ಎಂ.ಸಿ ಕಾಯ್ದೆ 1976 ರನ್ನು ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರಕ್ಕೆ ಬರೆದ ಪತ್ರ ಸಂಖ್ಯೆ: ಆಯುಕ್ತರು/ಪಿಎಸ್‌ಆರ್/4/9506/12-13, ದಿನಾಂಕ: 19-12-2012.
10) ಹಿಂದಿನ ಪಾಲಿಕೆ ಆಯುಕ್ತರ ಆದೇಶದ ಸಂಖ್ಯೆ:ಜಿ 4669/12-13, ದಿನಾಂಕ:24.08.2012.
11) ಸರ್ಕಾರದ ಆದೇಶದ ಸಂಖ್ಯೆ:ನಅಇ 356 ಎಂಎನ್‌ವೈ2012,ದಿನಾಂಕ:10.07.2012.

ಪಾಲಿಕೆಯು ದಿನಾಂಕ: 24-06-2011 ರಂದು ಪ್ರಮುಖ ಕನ್ನಡ ಮತ್ತು ಆಂಗ್ಲ ದಿನ ಪತ್ರಿಕೆಗಳಲ್ಲಿ ಕೆಳಕಂಡಂತೆ ಪತ್ರಿಕಾ ಪ್ರಕಟಣೆಗಳನ್ನು ನೀಡಲಾಗಿತ್ತು."ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ/ ಪಾದಚಾರಿ ರಸ್ತೆಗಳಲ್ಲಿ ಆಪ್ಟಿಕಲ್ ಫೈಬರ್ ಕೇಬಲ್ಸ್ ಹಾಕಲು ಅನುಮತಿ ನೀಡುವುದನ್ನು ಇಂದಿನಿಂದ ಸ್ಥಗಿತಗೊಳಿಸಿ, ಈ ಬಗ್ಗೆ ದರ ನಿಗದಿ/ತಿಂಗಳ ಬಾಡಿಗೆ ನಿಗದಿ/ವರ್ಷದ ಬಾಡಿಗೆ ನಿಗದಿ ಇತ್ಯಾದಿಗಳ ಬಗ್ಗೆ ನೀತಿ ನಿಯಮ ರೂಪಿಸುವವರೆಗೆ ರದ್ದುಪಡಿಸಲಾಗಿದೆ. ಈ ಬಗ್ಗೆ ಅನುಮತಿ ನೀಡಿದ್ದರೂ ಸಹ ಆಪ್ಟಿಕಲ್ ಫೈಬರ್ ಕೇಬಲ್ಸ್ ಏಜೆನ್ಸಿ ರವರು ಇಂದಿನಿಂದ ನೀತಿ ನಿಯಮ ರೂಪಿಸುವವರೆಗೆ ಕೆಲಸ ಸ್ಥಗಿತಗೊಳಿಸಲು ಸೂಚಿಸಿದೆ".

ದಿನಾಂಕ: 12-07-2011 ರಂದು ಬೆಂಗಳೂರಿನಲ್ಲಿ ಓ.ಎಫ್.ಸಿ ಕೇಬಲ್ ಗಳನ್ನು ಹಾಕುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ತಾತ್ಕಾಲಿಕವಾಗಿ ನಿಷೇಧಿಸಿರುವುದನ್ನು ಪರಿಹರಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಯಲ್ಲಿ, ಅಪರ ಮುಖ್ಯ ಕಾರ್ಯದರ್ಶಿ-ನಗರಾಭಿವೃದ್ಧಿ ಇಲಾಖೆ, ಇವರು ಈ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುವವರಿಗೆ ಬಿಬಿಎಂಪಿ ಯವರು ದಿನಾಂಕ: 24, ಜೂನ್ 2011 ರಂದು ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಿರುವುದನ್ನು ಅಮಾನತ್ತಿನಲ್ಲಿ ಇಟ್ಟಿರುತ್ತಾರೆ.

ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: WP 37882-37893/2011(LB)BMP ರಲ್ಲಿ ದಿನಾಂಕ: 11-10-2012 ರಂದು ಕೆಳಕಂಡಂತೆ ಪಾಲಿಕೆಯಿಂದ ಪ್ರಮಾಣ ಪತ್ರ ಪಡೆದು ತೀರ್ಪು ನೀಡಿರುತ್ತದೆ.

ದಿನಾಂಕ: 11-10-2012 ರಂದು ಪಾಲಿಕೆಯು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಈ ಕೆಳಕಂಡಂತೆ ಪ್ರಮಾಣ ಪತ್ರ ನೀಡಿರುತ್ತದೆ.

1. BBMP would not claim rent from petitioners till such time appropriate rules/bye laws/regulations are made.
2. BBMP with draws Annexures-H1 to H8 and it would not be given effect to.
3. The applications for permission, if any, of the petitioners is pending consideration, same would be considered in accordance with law.

The Hon'ble High Court of Karnataka order dated: 11-10-2012 is as below:

BBMP had declared that it would not claim rents pursuant toAnnexure-K (Council resolution dated 31-5-2011) and would withdraw annexure-H.1 to H.8 and any applications by the petitioners seeking permission for laying of the Optical Fibre Cable in question would be considered in accordance with law.

BBMP should place the petitioners on notice of any intended disconnection or other punitive action they intend to take insofar as the OFCs, which are construed as being illegal. If there are instances where the petitioners deny that any OFCs have been laid by them or if the cables are laid in such unlikely places as sewerage lines, it is open for the respondents to deal with the same as it pleases.

Therefore, the affidavit now filed is placed on record and the petition is disposed of with the above observations, which are observations for guidance of the parties to regulate their affairs. It is open for the petitioners to approach the Commissioner, BBMP with their grievances, who is requested to address the same and find effective solutions without the petitioners having to approach this Court.

ಕೆಲವು ಖಾಸಗಿ ಓ.ಎಫ್.ಸಿ ಸಂಸ್ಥೆಗಳು ಪತ್ರವನ್ನು ನೀಡಿ ಓ.ಎಫ್.ಸಿ ಅಳವಡಿಸಲು ಸರ್ಕಾರಿ ಸಂಸ್ಥೆಗಳಿಗೆ ಅನುಮತಿ ನೀಡುತ್ತಿರುವಂತೆ ತಮಗೂ ಸರ್ಕಾರಿ ಸಂಸ್ಥೆಗಳಿಗೆ ವಿಧಿಸುತ್ತಿರುವ ಶುಲ್ಕವನ್ನು ವಿಧಿಸಿ ಅನುಮತಿ ನೀಡಲು ಕೋರಿರುತ್ತಾರೆ.

ಕೆ.ಎಂ.ಸಿ ಕಾಯ್ದೆ ತಿದ್ದುಪಡಿಗೆ ಉಲ್ಲೇಖ(6) ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿರುತ್ತದೆ.

ಶ್ರೀ ಕೆ.ವಿ ನರಸಿಂಹನ್ ಪಾಲಿಕೆ ಪ್ಯಾನೆಲ್ ವಕೀಲರು ಹಾಗೂ ಕಾನೂನು ಕೋಶದ ಮುಖ್ಯಸ್ಥರು ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ.

ಶ್ರೀ.ಕೆ.ವಿ ನರಸಿಂಹನ್ ವಕೀಲರು ಓ.ಎಫ್.ಸಿ ಅಳವಡಿಸಲು ಪರವಾನಗಿ ನೀಡುವಾಗ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಸೇವಾ ಸಂಸ್ಥೆಗಳ ನಡುವೆ ತಾರತಮ್ಯ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ ಮತ್ತು ಪಾಲಿಕೆಯು ನಿಯಾಮಾವಳಿಗಳನ್ನು ರಚಿಸಿ ಅನುಮತಿ ಪಡೆಯಲು ಸಾಕಷ್ಟು ಕಾಲಾವಕಾಶ ಬೇಕಾಗಿರುತ್ತದೆ. ಹಾಲಿ ಸರ್ಕಾರಿ ಸಂಸ್ಥೆಗಳಿಗೆ ಓ.ಎಫ್.ಸಿ ಅಳವಡಿಕೆಗೆ ಅನುಮತಿ ನೀಡಲಾಗುತ್ತಿದೆ. ಸದರಿ ಆದೇಶದಂತೆ ಸರ್ಕಾರಿ ಸಂಸ್ಥೆಗಳಿಗೆ ವಿಧಿಸುತ್ತಿರುವ ಶುಲ್ಕದಂತೆ ಖಾಸಗಿ ಸಂಸ್ಥೆಗಳಿಗೂ ಸಹ ಶುಲ್ಕವನ್ನು ವಿಧಿಸಿ ಓ.ಎಫ್.ಸಿ ಅಳವಡಿಕೆಗೆ ಖಾಸಗಿ ಸಂಸ್ಥೆಗಳಿಗೂ ಅನುಮತಿ ನೀಡಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2012-13 ನೇ ಸಾಲಿನಲ್ಲಿ ಸುಮಾರು 73.50 ಕಿ.ಮೀ ಉದ್ದದ 45 ರಸ್ತೆಗಳನ್ನು Tendersure ಮಾರ್ಗದರ್ಶನದಂತೆ 83 ರಸ್ತೆಗಳನ್ನು ಡಾಂಬರೀಕರಣ ಹಾಗೂ ಅಭಿವೃದ್ಧಿ ಪಡಿಸಲು, ಹೊಸ ವಲಯದ 13 ಮುಖ್ಯ ರಸ್ತೆಗಳ ಅಗಲೀಕರಣ ಕಾಮಗಾರಿ, ಆಯ್ದ 5 ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಒಟ್ಟು 16 ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಹಾಗೂ ಕಾರಿಡಾರ್ ಅಭಿವೃದ್ಧಿ ಕಾಮಗಾರಿಗಳು, ಪೂರ್ಣಗೊಂಡಿರುವ ಮೆಟ್ರೋ ಕಾಮಗಾರಿಯ 4 ರೀಚ್‌ಗಳಲ್ಲಿ ಸಮಗ್ರ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸುಮಾರು ರೂ 893.4 ಕೋಟಿಗಳನ್ನು 2012-13ನೇ ಸಾಲಿನಲ್ಲಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

ನಗರದ ಸರ್ವತೋಮುಖ ಅಭಿವೃದ್ಧಿ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮತ್ತು ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಕೆಳಕಂಡಂತೆ ಕ್ರಮ ವಹಿಸಲು ಆದೇಶಿಸಿದೆ.

1) ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಕೆ.ಎಂ.ಸಿ ಕಾಯ್ದೆಗೆ ತಿದ್ದುಪಡಿ ಮಾಡಿ ನೀತಿ ನಿಯಮಾವಳಿಗಳನ್ನು (Rules and Regulation) ರಚಿಸಿ ಅದರಂತೆ ಶುಲ್ಕ ವಿಧಿಸಿ ಓ.ಎಫ್.ಸಿ ಅಳವಡಿಕೆಗೆ ಅನುಮತಿ ನೀಡಲು ಸಾಕಷ್ಟು ಕಾಲಾವಕಾಶ ಆಗುವುದರಿಂದ ಓ.ಎಫ್.ಸಿ ಅಳವಡಿಕೆಗೆ ಅನುಮತಿ ಕೋರುವ ಖಾಸಗಿ ಓ.ಎಫ್.ಸಿ ಸಂಸ್ಥೆಗಳಿಗೆ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಿದಂತೆ ಓ.ಎಫ್.ಸಿ ಕೇಬಲ್ ಗಳನ್ನು ಅಳವಡಿಸಲು ಪ್ರತಿ ಗುಂಡಿಗೆ ರೂ 30000/-, ಪ್ರತಿ ಮೀಟರ್‌ಗೆ ರೂ. 600=00 ಗಳಂತೆ ಅಳವಡಿಸಲು ಆರಂಭಿಕ ಶುಲ್ಕ (ಯಾವುದು ಅಧಿಕವೊ) ಅದರಂತೆ ಶುಲ್ಕ ವಿಧಿಸಿ ಮತ್ತು ಹಿಂತಿರುಗಿಸ ಬೇಕಾದ ಠೇವಣಿ ಹಣ ಅಳವಡಿಕೆ ಶುಲ್ಕದ ಶೇಕಡ 25 ರಷ್ಟು (Refundable deposit 25% of laying charges) ಪಾವತಿಸಿಕೊಂಡು ನೀತಿ ನಿಯಮಾವಳಿಗಳನ್ನು (Rules and Regulation) ರಚಿಸಿದಾಗ ವಿಧಿಸಲ್ಪಡುವ ಶುಲ್ಕ ಪಾವತಿಸುವ ಮತ್ತು ಷರತ್ತುಗಳನ್ನು ಪಾಲಿಸುವ ಪ್ರಮಾಣ ಪತ್ರ ಪಡೆದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ, ಓ.ಎಫ್.ಸಿ ಅಳವಡಿಸಲು ಅನುಮತಿ ಕೋರುವ ಖಾಸಗಿ ಸಂಸ್ಥೆಗಳಿಗೂ ಸರ್ಕಾರದ ಸಂಸ್ಥೆಗಳಿಗೆ ಅನುಮತಿ ನೀಡುತ್ತಿರುವಂತೆಯೇ ಓ.ಎಫ್.ಸಿ ಅವಡಿಕೆಗೆ ಅನುಮತಿ ನೀಡಲು ಆದೇಶಿಸಿದೆ.

2) ಓ.ಎಫ್.ಸಿ ಅಳವಡಿಕೆಗೆ ಸಂಬಂಧಿಸಿದಂತೆ ವಲಯದ ಮುಖ್ಯ ಅಭಿಯಂತರರುಗಳು ಸ್ಥಳ ಪರಿಶೀಲನಾ ವರದಿಗಾಗಿ ಬಂದಂತಹ ಕಡತಗಳನ್ನು 7 ದಿನಗಳ ಒಳಗಾಗಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಮುಖ್ಯ ಅಭಿಯಂತರರು ಓ.ಎಫ್.ಸಿ ರವರ ಕಛೇರಿಗೆ ತಪ್ಪದೇ ಸಲ್ಲಿಸುವುದು.

3) ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರು ಓ.ಎಫ್.ಸಿ ಅಳವಡಿಕೆಗೆ ಅನುಮತಿ ಕೋರಿ ಬರುವಂತಹ ಅರ್ಜಿಗಳನ್ನು 15 ದಿನಗಳೊಳಗಾಗಿ ವಿಲೇವಾರಿ ಮಾಡುವುದು.

4) ಲೆಕ್ಕಾಧಿಕಾರಿ(ಯೋಜನೆ) ರವರು ಮುಖ್ಯ ಅಭಿಯಂತರು(ಓ.ಎಫ್.ಸಿ ಮತ್ತು ಮಾರುಕಟ್ಟೆ) ರವರ ಅಧೀನದಲ್ಲಿ ಕಾರ್ಯನಿರ್ವಹಿಸಿ ಓ.ಎಫ್.ಸಿ ಅಳವಡಿಕೆಗೆ ಸಂಬಂಧಿಸಿದಂತೆ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಓ.ಎಫ್.ಸಿ ಬ್ಯಾಂಕ್ ಖಾತೆಗೆ ಜಮಾ ಮಾಡಿ ಪ್ರತ್ಯೇಕವಾಗಿ ನಿರ್ವಹಿಸಿ ಇದರ ಬಗ್ಗೆ ಮಾಸಿಕ ವರದಿಯನ್ನು ಮುಖ್ಯ ಲೆಕ್ಕಾಧಿಕಾರಿಗಳ ಮೂಲಕ ಆಯುಕ್ತರಿಗೆ ಸಲ್ಲಿಸಲು ಸೂಚಿಸಿದೆ.

5) ವಿಶೇಷ ಆಯುಕ್ತರು (ಯೋಜನೆ)ರವರ ಅಧ್ಯಕ್ಷತೆಯಲ್ಲಿ ಮುಖ್ಯ ಅಭಿಯಂತರರು (ಓ.ಎಫ್.ಸಿ), ಮುಖ್ಯ ಅಭಿಯಂತರರು (ವಿಜಿಲೆನ್ಸ್ ಹಾಗೂ ಜಾಗೃತಿ) ಮುಖ್ಯ ಅಭಿಯಂತರರು (ರಸ್ತೆ ಮತ್ತು ಮೂಲಭೂತ ಸೌಕರ್ಯ)ರವರನ್ನೊಳಗೊಂಡಂತೆ ಸಮಿತಿಯನ್ನು ರಚಿಸಿದೆ. ಓ.ಎಫ್.ಸಿ ಅಳವಡಿಕೆಗೆ ಅನುಮತಿ ನೀಡುವ ಸಂಬಂಧ ಸದರಿ ಸಮಿತಿಯು ತೀರ್ಮಾನವನ್ನು ಕೈಗೊಂಡು ಮಾನ್ಯ ಆಯುಕ್ತರ ಅನುಮೋದನೆ ಪಡೆದು ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರು ಅನುಮತಿ ಪತ್ರ ನೀಡಲು ಆದೇಶಿಸಿದೆ.

22.2.2013

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ